JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ವೃತ್ತಿ ಆಧಾರಿತವಾಗಿ ತಳವಾರಿಕೆ

ಸಚಿನಕುಮಾರ ಕಳಕಪ್ಪ ತಳವಾರ
ಬುಡಕಟ್ಟುಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ-೫೮೩೨೭೬
ಮೊ.ನಂ- ೯೩೪೩೩೨೨೨೨೪

**ಪ್ರಸ್ತಾವನೆ :**

ತಳವಾರಿಕೆ ಎಂಬುದು ಒಂದು ಜಾತಿ ಸೂಚಕ ಪದವಾಗಿದ್ದು ವೃತ್ತಿ ಆಧಾರಿತ ಪದವಾಗಿಯೂ ಬಳಕೆಯಲ್ಲಿದೆ. ನಾಯಕ ಸಮುದಾಯದಲ್ಲಿ ಕುಲನಾಮವಾಗಿ ತಳವಾರ ಎಂಬದು ಸಾಮಾನ್ಯವಾಗಿ ಕಾಣಬರುತ್ತದೆ. ಆದ್ದರಿಂದಲೇ ತಳವಾರರ ಕುರಿತು ಅಧ್ಯಯನ ಮಾಡುವ ಆಸಕ್ತಿ ಹೆಚ್ಚಾಯಿತು. ಕೆಲವು ನಾಯಕರಲ್ಲಿ ಕುಲನಾಮವಾಗಿ ತಳವಾರ ಎಂಬ ಪದವನ್ನು ಬಳಸಿದ್ದರೂ ಸಹ ಅದರ ಪದ್ಧತಿ, ಸಂಪ್ರದಾಯಗಳನ್ನು ಅವರು ರೂಡಿಸಿಕೊಂಡಿಲ್ಲ. ಆದರೆ ಪ್ರಸ್ತುತ ಲೇಖನದಲ್ಲಿ ತಳವಾರಿಕೆಯನ್ನು ಒಂದು ಜಾತಿ ಸೂಚಕವಾಗಿ ನೋಡದೆ ಕೇವಲ ವೃತ್ತಿ ಸೂಚಕವಾಗಿ ನೋಡುವುದರ ಮೂಲಕ ಇವರ ಪದ್ಧತಿ ಸಂಪ್ರದಾಯಗಳನ್ನು ತಿಳಿಸಲು ಪ್ರಸ್ತುತ ಲೇಖನವನ್ನು ಸಿದ್ಧಪಡಿಸಲಾಗಿದೆ. ಈ ಲೇಖನದ ಮೂಲಕ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ತಳವಾರಿಕೆಯನ್ನು ಒಂದು ವೃತ್ತಿಯಾಗಿ ಮಾತ್ರ ತಿಳಿಸುವ ಪ್ರಯತ್ನ ಮಾಡಲಾಗಿದೆ. ತಳವಾರಿಕೆ ವೃತ್ತಿಯಾಗಿ ಗಮನಿಸಿದಾಗ ಪರಂಪರೆಯಿಂದಲೂ ಕೆಲವು ಸಮುದಾಯಗಳು ತಳವಾರಿಕೆಯನ್ನು ವೃತ್ತಿಯಾಗಿ ಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದು. ರಾಜ ಮಹಾರಾಜರ ಕಾಲದಿಂದಲೂ ತಳವಾರಿಕೆ ವೃತ್ತಿಯು ಒಂದು ಸೇವಾ ವರ್ಗಕ್ಕೆ ಸೇರಿದ್ದಾಗಿದ್ದು ರಾಜರ ಆಳ್ವಿಕೆಯ ಸಮಯದಲ್ಲಿ ರಾಜ್ಯದ ರಕ್ಷಣೆ, ರಾಜರ ರಕ್ಷಣೆ, ಊರಿನ ರಕ್ಷಣೆಯ ಜವಬ್ದಾರಿ ತಳವಾರರಿಗೆ ಸೇರಿರುತ್ತದೆ. ಈ ಹೊಣೆಯನ್ನು ತಳ ಸಮುದಾಯದವರಿಗೆ ಮೇಲ್ವರ್ಗದವರು ವಿಧಿಸಿದ ವೃತ್ತಿಯಾಗಿರುತ್ತದೆ.

ಪ್ರಸ್ತುತ ಲೇಖನವನ್ನು ಸಿದ್ಧಪಡಿಸಲು ಕೊಪ್ಪಳ ಜಿಲ್ಲೆಯನ್ನು ವ್ಯಾಪ್ತಿಯನ್ನಾಗಿಸಿಕೊಂಡು ಈ ಭಾಗದಲ್ಲಿ ತಳವಾರಿಕೆ ವೃತ್ತಿಯನ್ನು ಮಾಡುತ್ತಿರುವ ಸಮುದಾಯದವರಿಂದ ಮಾಹಿತಿ ಸಂಗ್ರಹಿಸಿ ಅದರ ಆಧಾರದ ಮೇಲೆ ತಳವಾರಿಕೆ ವೃತ್ತಿಯು ಹೇಗೆ ಹುಟ್ಟಿಕೊಂಡಿತು? ಮತ್ತು ಆ ವೃತ್ತಿಯನ್ನು ಅನುಸರಿಸುತ್ತಿರುವ ಸಮುದಾಯಗಳಾವುವು? ಈ ವೃತ್ತಿಯನ್ನು ಅನುಸರಿಸುತ್ತಿರುವ ಸಮುದಾಯಗಳಿಗೆ ಸಮಾಜದಲ್ಲಿ ಸಿಗುತ್ತಿರುವ ಸ್ಥಾನಮಾನ ಎಂಥಹದ್ದು ಎಂದು ವಿಶ್ಲೇಷಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಅಧ್ಯಯನದ ಉದ್ದೇಶಗಳು ತಳವಾರಿಕೆ ವೃತ್ತಿಯ ಹಿನ್ನಲೆ ಮತ್ತು ಮೂಲವನ್ನು ತಿಳಿದುಕೊಳ್ಳುವುದು. ತಳವಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿರುವವರ ಸಾಮಾಜಿಕ ಸ್ಥಾನಮಾನ ಮತ್ತು ಅವರಲ್ಲಾಗಿರುವ ಬದಲಾವಣೆಗಳನ್ನು ಅಧ್ಯಯನ ಮಾಡುವುದು.

**ಅಧ್ಯಯನದ ಉದ್ದೇಶಗಳು**

- ತಳವಾರಿಕೆ ಅಂದರೆ ಎನು ? ತಳವಾರಿಕೆ ವೃತ್ತಿ ಮಾಡುವ ಸಮುದಾಯಗಳಾವವು ?
- ಪ್ರಸ್ತುತ ದಿನಮಾನದಲ್ಲಿ ತಳವಾರರ ವೃತ್ತಿಯೆನಾಗಿದೆ

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಅವಲೋಕನ, ಮೂಲಕವು ಹಾಗೂ ಅನುಷಂಗಿಕ ಮಾಹಿತಿಯನ್ನು ಈಗಾಗಲೇ ನಡೆದಿರುವ ಸಂಶೋಧನಾ ಅಧ್ಯಯನಗಳು, ಗ್ರಂಥಗಳು ಮತ್ತು ನಿಯತಕಾಲಿಕೆಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಕೊಪ್ಪಳ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೊಪ್ಪಳ ಜಿಲ್ಲೆಯು ಏಪ್ರಿಲ್ ೧, ೧೯೯೮ ರಂದು ಅಸ್ತಿತ್ವಕ್ಕೆ ಬಂದಿದೆ. ಇದಕ್ಕೂ ಮೊದಲು ಈ ಜಿಲ್ಲೆಯು ರಾಯಚೂರು ಜಿಲ್ಲೆಯ ಒಂದು ಭಾಗವಾಗಿತ್ತು. ಈ ಜಿಲ್ಲೆಯನ್ನು ಉತ್ತರದಲ್ಲಿ ಬಾಗಲಕೋಟೆ ಮತ್ತು ರಾಯಚೂರು, ಪೂರ್ವದಲ್ಲಿ ರಾಯಚೂರು ಮತ್ತು ಬಳ್ಳಾರಿ, ದಕ್ಷಿಣದಲ್ಲಿ ಬಳ್ಳಾರಿ ಹಾಗೂ ಪಶ್ಚಿಮದಲ್ಲಿ ಗದಗ ಜಿಲ್ಲೆಗಳು ಸುತ್ತುವರಿದಿವೆ. ಈ ಜಿಲ್ಲೆಯು ೫,೫೭೦ ಚ.ಕಿಮಿ ವಿಸ್ತೀರ್ಣದಲ್ಲಿ ಕನಕಗಿರಿ, ಕಾರಟಗಿ, ಗಂಗಾವತಿ, ಕೊಪ್ಪಳ, ಯಲಬುರ್ಗಾ, ಕುಷ್ಟಗಿ ಹಾಗೂ ಕುಕನೂರು, ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು ೨೦ ಹೋಬಳಿಗಳು. ೫೯೪ ಜನವಸತಿ ಗ್ರಾಮಗಳು, ೩೫ ಜನವಸತಿಯಿಲ್ಲದ ಗ್ರಾಮಗಳು, ೧೫೩ ಗ್ರಾಮ ಪಂಚಾಯತಿಗಳು ಹಾಗೂ ೯ ಪಟ್ಟಣ ಪಂಚಾಯತಿ/ಪುರಸಭೆಗಳನ್ನು ಒಳಗೊಂಡಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೧,೩೮೯,೯೨೦ ಜನಸಂಖ್ಯೆ ಕಂಡು ಬರುತ್ತದೆ. ಜಿಲ್ಲೆಯಲ್ಲಿ ವಿವಿಧ ಸಮುದಾಯಗಳ ಜನರು ನೆಲೆಸಿದ್ದು, ವ್ಯವಸಾಯ, ಕೃಷಿ ಕೂಲಿ, ಪಶುಸಂಗೋಪನೆ, ಸಣ್ಣಪುಟ್ಟ ವ್ಯಾಪಾರ ಇತ್ಯಾದಿ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದು, ತಳವಾರಿಕೆ ಕೂಡ ಸಾಂಪ್ರದಾಯಿಕ ವೃತ್ತಿಯಾಗಿದೆ. ಪ್ರಸ್ತುತ ಈ ವೃತ್ತಿಯನ್ನ ಕೊಪ್ಪಳ ಜಿಲ್ಲೆಯಲ್ಲಿ ತಳವಾರಿಕೆ ಮಾಡುವವರನ್ನ ಗ್ರಾಮ ಸಹಾಯಕನೆಂತಲು ಕರಿಯುವುದನ್ನ ಕಾಣಬಹುದಾಗಿದೆ.

**ತಳವಾರ ಪದದ ಪದ ನಿಷ್ಪತ್ತಿ:**

"ತಳವಾರ" ಎಂಬುದು ಸಮಾಸ ಪದ ತಳ+ವಾರ =ತಳವಾರ. 'ತಳ' ಎಂಬ ಶಬ್ದಕ್ಕೆ ಹುಟ್ಟೂರು, ಸ್ವಂತದವರು ಎಂಬರ್ಥವಿದೆ. ಜನಸಾಮಾನ್ಯರು ಅಪರಿಚಿತರು ಪರ ಊರಿನವರು ಭೇಟ್ಟಿಯಾದಾಗ ಪರಿಚಯಕ್ಕಾಗಿ ನಿಮ್ಮ ತಳ ಯಾವುದು ? ಎಂಬ ಪ್ರಶ್ನೆ ಹಾಕುವುದು ಸಾಮಾನ್ಯ ವಿಷಯ. 'ಪಾರ' ಎಂಬುದಕ್ಕೆ ಸಂರಕ್ಷಣೆ ಎಂಬರ್ಥ. ತಳದ 'ಪಾರ' ಮಾಡುವವನು ತಳವಾರ ಎಂದಾದ. ತಳವಾರ ಶಬ್ದ ತಳರ, ತಳವರ, ತಳಾರ, ತಳಾರಿ, ತಾಳವಾರೆ ಮುಂತಾದ ರೂಪಗಳಲ್ಲಿ ಸಿಗುತ್ತದೆ. ಈ ಎಲ್ಲಾ ರೂಪಗಳಿಗೆ ಸಾಮಾನ್ಯವಾದ ಒಂದೇ ಅರ್ಥ ಕಾವಲುಗಾರ, ಗ್ರಾಮರಕ್ಷಕ, ನಗರರಕ್ಷಕ ಅನೇಕ ಹಳಗನ್ನಡ ಗ್ರಂಥಗಳಲ್ಲಿ, ಶಾಸನಗಳಲ್ಲಿ ತಳವಾರನ ಉಲ್ಲೇಖ ಹಲವಾರೆಡೆ ಆತನ ವೃತ್ತಿಯನ್ನ ಕೀಲಿಸಿಕೊಂಡೆ ದೊರೆಯುತ್ತದೆ. ವಡ್ಡಾರಾಧನೆಯ 'ವಿದ್ಯುಚ್ಚೋರನಕಥೆ'ಯಲ್ಲಿ ಯಮದಂಡನೆಂಬ ತಳವಾರನ ಉಲ್ಲೇಖದೊರೆಯುತ್ತದೆ.(೧) ಈ ಯಮದಂಡ ಊರಕಾವಲುಗಾರರು ಹೌದು ರಾಜ ಅಪ್ಪಣೆ ಕೊಟ್ಟರೆ ಕಳ್ಳರಿಗೆ ಶಿಕ್ಷೆ ವಿಧಿಸುವವನು ಹೌದು. ಈ ಕಥೆಯ ಪ್ರಕಾರ ತಲವಾರಿಕೆ ಎಂಬುದು ಹೊಟ್ಟೆ ಹೊರೆಯಲು ಏನೋ ಇರಲಿ ಎಂದು ಅವಲಂಬಿಸಿದ ಹಗುರ ವೃತ್ತಿಯಲ್ಲ. ವೃತ್ತಿಯಲ್ಲಿ ಅವನಿಗಿರುವ ಶ್ರದ್ದೆ ಇಲ್ಲಿ ಅಚ್ಚೊತ್ತಿದೆ. ವೃತ್ತಿಯನ್ನು ಕರಗತ ಮಾಡಿಕೊಳ್ಳಲು ಕ್ರಮವಾದ ಅಭ್ಯಾಸವಿದೆ. ಗ್ರಾಮ ರಕ್ಷಕನಾದ ತಳವಾರನನ್ನು ಕುರಿತು ಸರ್ವಜ್ಞನ ದೃಷ್ಟಿಕೋನ ಹೀಗಿತ್ತು.

"ಎಳ್ಳು ಗಾಣಿಗ ಬಲ್ಲ,

ಸುಳ್ಳು ಸಿಂಪಿಗ ಬಲ್ಲ ,

ಕಳ್ಳರನ್ನು ಬಲ್ಲ ತಳವಾರ ಎಂಬುದು ಸರ್ವಜ್ಞನ" ಹೇಳಿಕೆ.

ಬಣಜಿಗ ನೆಲ್ಲವನು ಬಲ್ಲ, ಎಂದು ಆ ಕಾಲದ ಸ್ಥಿತಿ-ಗತಿಯನ್ನು ತಿಳಿಸಿದ್ದಾನೆ. ತಳವಾರನ ಪಾಂಡಿತ್ಯ ಅರಿತು ಸರ್ವಜ್ಞ , ಕಳ್ಳರನ್ನು ಬಲ್ಲವನಂತೆ ಊರಿನಲ್ಲಿ ಅದರ ಸುತ್ತ ಮುತ್ತ ಇರುವ ಚೋರಗ್ರೇಸರ ಚಾರಿತ್ರಾಯ ಚಮತ್ಕಾರಗಳನ್ನು ತಳವಾರನು ತಿಳಿದಿರುತ್ತಾನೆ. ಆ ತಿಳುವಿನಿಂದಲೇ ಅವನು ಗ್ರಾಮರಕ್ಷಕನಾಗಬಲ್ಲ."(೨)

"ಉತ್ತರ ಕರ್ನಾಟಕದಲ್ಲಿ ತಳವಾರ ಕುಲನಾಮವಾಗಿಯೂ ಇರುವುದು, ಹೀಗೆ ಇಲ್ಲಿ ತಳವಾರ ವೃತ್ತಿ, ಉಪಜಾತಿ ಮತ್ತು ಕುಟುಂಬದ ಹೆಸರನ್ನು ಸಂಕೇತಿಸುತ್ತದೆ. ತಳವಾರ ಎಂದರೆ ಊರಿನ ಕಾವಲುಗಾರ, ಗ್ರಾಮರಕ್ಷಕ, ಸಂರಕ್ಷಕನೆಂದು ಕರೆಯಲಾಗಿದೆ. ಇದರ ಬಗ್ಗೆ ಕನ್ನಡಕಾವ್ಯ ಮತ್ತು ಶಾಸನಗಳಲ್ಲಿ ತಳಾರ, ತಳವಾರ,ತಲವಾರ,ತಲಕಾರ, ತಳಾರಿ ಎಂದೆಲ್ಲ

ಉಲ್ಲೇಖಗಳಿವೆ."೩ ಇಷ್ಟೆಲ್ಲ ಹೆಸರುಗಳಿಂದ ತಳವಾರನನ್ನು ಕರೆದರೂ ಎಷ್ಟೇ ಊರಿನ ಸಂರಕ್ಷಣೆಯ ಕಾರ್ಯ ನಿರ್ವಹಿಸಿದರೂ ಸಹ ತಳವಾರನೆಂದರೆ ತಳ ಸಮುದಾಯಕ್ಕೆ ಸೇರಿದವನೆಂದೇ ಗುರುತ್ತಿಸುತ್ತಾರೆ.

ಸಂಶೋದಕರಾದ ವಿರುಪಾಕ್ಷ ಪೂಜಾರಳ್ಳಿಯವರು ತಮ್ಮ 'ಕರ್ನಾಟಕದಲ್ಲಿ ತಳವಾರಿಕೆ' ಎಂಬ ಪುಸ್ತಕದಲ್ಲಿ ತಳವಾರರ ಲಕ್ಷಣಗಳು, ಕರ್ತವ್ಯಗಳು ಅವರ ಸ್ವರೂಪ, ತಳವಾರ ಹೆಸರಿನ ಸ್ಥಳ ನಾಮಗಳು, ಅಡ್ಡ ಹೆಸರುಗಳು, ತಳವಾರರ ಬೆಡಗುಗಳು, ಸಾಹಿತ್ಯ ಮತ್ತು ಶಾಸನಗಳಲ್ಲಿಯ ಉಲ್ಲೇಖಗಳನ್ನು ಗಮನಿಸಿದಾಗ ತಳವಾರಿಕೆ ಎಂಬುದು ಪ್ರಾಚೀನ ಕಾಲದಿಂದಲೂ ಅಳವಡಿಸಿಕೊಂಡ ವೃತ್ತಿಯಾಗಿದೆ ಎಂಬುದನ್ನು ಗಮನಿಸಬಹುದು.

ಉದಾ: "ತಳವಾರರ ಹೆಸರಿನ ಸ್ಥಳನಾಮಗಳು

ತಳವಾರಗೇರಾ- ಸುರಪುರ,ತಾ,-ಗುಲ್ಬರ್ಗ,ಜಿ

ತಳವಾರಕೊಪ್ಪ- ಖಾನಪುರ,ತಾ-ಬೆಳಗಾವಿ,ಜಿ

ದಳವಾಯಿ ಹಳ್ಳಿ- ಚಿತ್ರದುರ್ಗ,ತಾ-ಚಿತ್ರದುರ್ಗ,ಜಿ

ದಳವಾಯಿಹಳ್ಳಿ-ಹೊಸದುರ್ಗ,ತಾ-ಚಿತ್ರದುರ್ಗ,ಜಿ

ತಳವಾರಘಟ್ಟ-ಹಂಪಿ.ಹೊಸಪೇಟೆ-ಬಳ್ಳಾರಿಜಿಲ್ಲೆ

ತಳವಾರ: ಕೆಲವು ಮುಖ್ಯ ಅಡ್ಡಹೆಸರುಗಳು

ಸುರೇಶಬಾಬುಆರ್.ತಳವಾರ-ಹುಬ್ಬಳ್ಳಿ

ವೈ.ಆರ್.ತಳವಾರ-ಧಾರವಾಡ

ಭರಮಣ್ಣ ವಾಲಿಕಾರ-ಹುಬ್ಬಳ್ಳಿ

ತಳವಾರ ಪಂಪಣ್ಣ-ಹಂಪಿ,ಹೊಸಪೇಟೆ,ತಾ

ತಳವಾರರ ಬೆಡಗು ಸಾಹಿತ್ಯ, ಶಾಸನಗಳ ಉಲ್ಲೇಖ:

ತಳಗಲ್ಲು- ಊಳಿಗ ತಳವಾರ

ತರಮುಖರ-ತಳವಾರ ನಲ್ಲೋಬ

ಶಿರಮುಖರ-ತಳವಾರ ಮರಿಯನ ಸೇವೆ.(೪)

ಈ ರೀತಿಯಾಗಿ ಪಟ್ಟಿ ಮಾಡಿರುವ ಸಂಶೋದಕರು ತಳವಾರರನ್ನು ವೃತ್ತಿ ಆಧಾರವಾಗಿ ವಿಂಗಡಿಸಿರುವುದನ್ನು ಕಾಣಬಹುದು. ಇತ್ತಿಚಿನ ಅಂದರೆ ಆಧುನಿಕ ಕಾಲದಲ್ಲಿ ತಳವಾರಿಕೆ ವೃತ್ತಿಯನ್ನು ಪರಂಪರಾಗತವಾಗಿ ಬಳಸಿಕೊಂಡು ಬಂದಿರುವುದನ್ನು ಕಾಣಬಹುದು. ಕೆಲವು ಜಿಲ್ಲೆ, ಹಳ್ಳಿ, ಹೋಬಳಿಗಳಲ್ಲಿ ಇಂದಿಗೂ ತಳವಾರಿಕೆ ಒಂದು ವೃತ್ತಿಯಾಗಿ ಮುಂದುವರೆದಿದ್ದು ಅದನ್ನು ತಳ ಸಮುದಾಯದವರೆ ಅನುಸರಿಸುತ್ತಿದ್ದಾರೆ ಎಂಬುದನ್ನು ಪ್ರಸ್ತುತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಆದರೆ ಇಂದಿನ ತಳವಾರರು ಕೆಲವು ಕತ್ತಿ, ಕಠಾರಿ, ಬಂದೂಕು, ಪಿಸ್ತೂಲುಗಳನ್ನು ಉಪಯೋಗಿಸದೆ ಕೋಲು ಬಳಸುತ್ತಿರುವುದನ್ನ ಕಾಣಬಹುದು. ಗೌಡಿಕೆ, ಶಾನುಭೋಗರು ಊರಿನ ಮುಖ್ಯಸ್ಥರು ಗ್ರಾಮಗಳಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದು ಇವರೇ ತಳ ಸಮುದಾಯಗಳಿಗೆ ತಳವಾರಿಕೆ ವೃತ್ತಿ ಹಾಗೂ ವೇತನವನ್ನು ನಿಗದಿಪಡಿಸುತ್ತಾರೆ. ಹಾಗೂ ಕೆಲವು ಗ್ರಾಮಗಳಲ್ಲಿ ತಳವಾರಿಕೆ ವೃತ್ತಿ ತಲಮಾರುಗಳಿಂದ ಸಾಗುತ್ತಾ ಬಂದಿರುವುದನ್ನು ಕಾಣಬಹುದು. ಪ್ರಸ್ತುತ ಸರ್ಕಾರವು ತಳವಾರರನ್ನು ಜಾತಿ ಆಧಾರವಾಗಿ ಪರಿಶಿಷ್ಟ ಪಂಗಡಕ್ಕೆ (ಎಸ್.ಟಿ) ಸಮುದಾಯಕ್ಕೆ ಸೇರಿಸಿದೆ. ಆದರೆ ತಳವಾರಿಕೆಯನ್ನು ಒಂದು ವೃತ್ತಿಯಾಗಿ ಮಾತ್ರ ಅಧ್ಯಯನ ಕೈಗೊಂಡಾಗ ಸಿಕ್ಕ ಕೆಲವು ಮಾಹಿತಿಯನ್ನು ಮಾತ್ರ ಪ್ರಸ್ತುತ ಪಡಿಸುತ್ತಿದ್ದೇನೆ.

ತಳವಾರಿಕೆಯನ್ನು ವೃತ್ತಿ ಆಧಾರವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಪರಂಪರಾಗತವಾಗಿ ತಳವಾರಿಕೆ ವೃತ್ತಿಯನ್ನು ಮಾಡಿಕೊಂಡು ಬಂದ ಅನೇಕ ದಲಿತ ಸಮುದಾಯದವರು ತಮ್ಮತನಕ್ಕಾಗಿ ಹಾಗೂ ಆಧುನಿಕ ಜೀವನವನ್ನು ಹರಸಿ ಬೇರೆ ಊರುಗಳಿಗೆ ವಲಸೆ ಹೋಗಲು ಪ್ರಾರಂಭಿಸಿದರು. ಹಾಗೆ ಹೋಗುವಾಗ ತಳವಾರಿಕೆ ವೃತ್ತಿಯನ್ನು ವರ್ಗಾಹಿಸಲು ಪ್ರಾರಂಭಿಸಿದರು. ಈ ವೃತ್ತಿಯನ್ನು ಬೇರೆ ಬೇರೆ ಸಮುದಾಯದವರು ಸ್ವೀಕರಿಸಿರುವುದು ಕಂಡು ಬಂದಿದೆ.

ಕೊಪ್ಪಳ ಜಿಲ್ಲೆಯ ತಾಲೂಕುಗಳಲ್ಲಿ ತಳವಾರಿಕೆ ವೃತ್ತಿ ಮಾಡುತ್ತಿರುವ ಸಮುದಾಯಗಳು

ಕಾರಾಟಗಿ ತಾಲ್ಲೂಕು

ಬಸಾಪುರ-ನಾಯಕರು

ಬೂದಗುಂಪ- ಕುರುಬರು

ಕುಷ್ಟಗಿ ತಾಲ್ಲೂಕು

ಹನುಮನಾಳ-ನಾಯಕರು

ನೀರಲಕೊಪ್ಪ-ಮುಸ್ಲಿಮರು

ಬಿಳೇಕಲ್ಲು-ಕುರುಬರು

ನಿಲೋಗಲ್ಲು-ನಾಯಕರು

ಹೀರೆಗೊಣ್ಣಾಗರ-ನಾಯಕರು

ಯಲ್ಬುರ್ಗ ತಾಲ್ಲೂಕು

ರಾಂಪುರ-ಮುಸ್ಲಿಮರು

ಬಳೂಟಗಿ-ಮುಸ್ಲಿಮ

ಸಂಕನೂರು-ಕುರುಬರು

ಈ ಮಾಹಿತಿಯು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದ್ದು ಇವರೆಲ್ಲ ತಮ್ಮ ದಿನ ನಿತ್ಯದ ಜೀವನಕ್ಕಾಗಿ ತಳವಾರಿಕೆ ವೃತ್ತಿಯನ್ನು ಸ್ವೀಕರಿಸಿ ಬದುಕುತ್ತಿದ್ದಾರೆ.

ತಳವಾರಿಕೆ ವೃತ್ತಿಯನ್ನು ಕೈಕೊಂಡ ಕುಟುಂಬಗಳಿಗೆ ಆ ಊರಿನ ಜನರೇ ತಿಂಗಳಿಗೆ ಇಂತಿಷ್ಟು ಎಂದು ಎಲ್ಲರಿಂದಲೂ ಹಣ ಸಂಗ್ರಹಿಸಿ ತಳವಾರರಿಗೆ ಸಂಬಳದ ರೂಪದಲ್ಲಿ ಆರು ಸಾವಿರದಿಂದ ಎಂಟು ಸಾವಿರದವರೆಗೆ ಹಣವನ್ನು ಕೊಡುತ್ತಿದ್ದಾರೆ.ವಲಸೆ ಹೋದ ತಳವಾರಿಕೆ ಮಾಡುವ ಮನೆಯವರು ಬೆಂಗಳೂರು, ಕಾರವಾರ ಮೊದಲಾದ ಸ್ಥಳಗಳಲ್ಲಿ ಬೀಡು ಬಿಟ್ಟು ಜೀವನ ಸಾಗಿಸುತ್ತಿದ್ದರೆ, ಮತ್ತೆ ಕೆಲವು ತಳವಾರಿಕೆ ಮಾಡುವ ಮನೆಯವರು ವಲಸೆಯೂ ಹೋಗದೆ ಇದ್ದ ಗ್ರಾಮದಲ್ಲಿ ಕೃಷಿಯನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಇನ್ನೂ ಕೆಲವು ತಳವಾರರು ಪರಂಪರಾಗತವಾಗಿ ಬಂದ ವೃತ್ತಿಯನ್ನು ಬಿಡಲಾಗದೆ ಆ ವೃತ್ತಿಯ ಜೊತೆ ಜೊತೆಗೆ ಉಪ ಕಸುಬುಗಳನ್ನು ಮಾಡುತ್ತಿದ್ದಾರೆ. ಕೆಲವು ಗ್ರಾಮಗಳಲ್ಲಿ ತಳವಾರ ಕುಟುಂಬಗಳು ತಮ್ಮ ಕುಟುಂಬ ಸದಸ್ಯರಲ್ಲಿ ಒಬ್ಬರು ಕಡ್ಡಾಯವಾಗಿ ತಳವಾರಿಕೆ ವೃತ್ತಿಯನ್ನು ಕೈಗೊಂಡಿದ್ದಾರೆ. ಕೊಪ್ಪಳದಲ್ಲಿ ಸುಮಾರು ೪೦೦ ರಿಂದ ೫೭೦ ಜನರು ತಳವಾರಿಕೆ ವೃತ್ತಿಯನ್ನು ಅಳವಡಿಸಿಕೊಂಡವರಿದ್ದಾರೆ.

**ವರ್ತಮಾನದಲ್ಲಿ ತಳವಾರಿಕೆ**

ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತೆ ಸರಕಾರದ ಆದೇಶದ ಮೇರೆಗೆ ತಹಸಿಲ್ದಾರು ಯಲಬುರ್ಗಾ ತಾಲೂಕು ಜಿಲ್ಲಾ ರಾಯಚೂರು ಇವರ ನಡಾವಳಿಕೆ ಇದರ ಅನ್ವಯದಲ್ಲಿ ೧೯೭೪ರಲ್ಲಿ ತಳವಾರಿಕೆ ವೃತ್ತಿಯನ್ನು ಮಾಡುತ್ತಿರುವ ನಾಯಕರುಗಳು ಸಾಮಾನ್ಯವಾಗಿ ಪಾರಂಪರಿಕವಾಗಿ ಮಾಡುತ್ತಾ ಬಂದಿರುವುದನ್ನ ಕಾಣುತಿದ್ದು, ಈ ವೃತ್ತಿ ಇಗ ಕೆಲವು ಸಮುದಾಯದ ಜನರಲ್ಲಿ ಕಾಣುತಿದ್ದು ಆಯಾ ಪ್ರದೇಶದನ್ವಯ ಆ ವೃತ್ತಿ ಮಾಡುವ ಜನರು ಬೇರೆ ಬೇರೆ ಸಮುದಾಯದವರು ಆಗಿರುವುದನ್ನ ಕಾಣುತ್ತೆವೆ. ಕೊಪ್ಪಳ ಜಿಲ್ಲೆಯಲ್ಲಿ ಈ ವೃತ್ತಿಯನ್ನ ಅತಿಯಾಗಿ ನಾಯಕರು, ಕುರುಬರು ಹಾಗೂ ಮುಸ್ಲಿಂಮರು ಮಾಡುತ್ತಿರುವವರು ಕಾಣಸಿಗುತ್ತಾರೆ. ಇವರಿಗೆ ಗ್ರಾಮ ಸಹಾಯಕರು ಎಂದು ಸರಕಾರದ ಅಡಿಯಲ್ಲಿ ಸೇವೆಗೆ ತೆಗೆದುಕೊಳ್ಳಲಾಗಿದೆ ಇವರು ತಾಲೂಕು ಕಂದಾಯ ಇಲಾಕೆಯಲ್ಲಿ ಗ್ರಾಮ ಸಹಾಯಕರು ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಪ್ರಸ್ತುತ ಗ್ರಾಮ ಸಹಾಯಕರು ಕೊಪ್ಪಳ ಜಿಲ್ಲೆಯ ೭ ತಾಲೂಕಿನಲ್ಲಿ ೨೭೮ ಜನರು ಇದ್ದು ಇವರು ತಮ್ಮ ಪರಂಪರಗತವಾಗಿ ಬಂದ ವೃತ್ತಿಯಂತೆ ತಾಲೂಕು ಕಛೇರಿಯಲ್ಲಿ ಕೆಲಸ ಮಾಡುತಿದ್ದಾರೆ. ಇವರಿಗೆ ಸರಕಾರದ ವತಿಯಿಂದ ೧೨,೦೦೦ ರೂಪಾಯಿಗಳನ್ನ ಸಂಬಳವಾಗಿ ಕೊಡುತ್ತಿರುವುದನ್ನ ಕಾಣಬಹುದಾಗಿದೆ. ಈ ವೃತ್ತಿಯನ್ನ ಮಾಡುವ ವ್ಯಕ್ತಿಯು ತನ್ನ ೬೦ ವಯಸ್ಸಿನ ನಂತರ ತನ್ನ ಮನೆಯ ಮಗನಿಗೆ ಪಾರಂಪರಿಕವಾಗಿ ಕೊಡುತ್ತಾ ಬಂದಿರುವುದಾಗಿ ವ್ಯಕ್ತ ಪಡಿಸಿದ್ದಾರೆ. ಇವರ ವೃತ್ತಿ ಆಯಾ ಗ್ರಾಮ ಪಂಚಾಯಿತಿಯ ಗ್ರಾಮ ಲೆಕ್ಕಾದಿಕಾರಿ ಅಥವಾ ಬೇರೆ ಮೇಲಿನ ಅಧಿಕಾರಿಗಳು ಬಂದಾಗ ಆಯಾ ಊರಿನ ಸಂಕ್ಷೀಪ್ತ ಮಾಹಿತಿಯನ್ನ ತಿಳಿಸಿಕೊಡುವಲ್ಲಿ ಈ ತಳವಾರನ ಪಾತ್ರ ಪ್ರಮುಖವಾಗಿರುವುದು ಗಮನಿಸಬಹುದು ಹಾಗೆಯೆ ಆಯಾ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಜನರ ಜನನ ಪ್ರಮಾಣ ಪತ್ರ, ಮನೆ ಕಾಗದ ಪತ್ರ, ಹೋಲದ ಪಹಣಿ, ಆಧಾರ ಕಾರ್ಡ, ರೇಶನ ಕಾರ್ಡ ಇನ್ನಿತರ ಕೆಲಸ ಕಾರ್ಯಗಳನ್ನ ಇವರು ಮಾಹಿತಿ ಜೊತೆಗೆ ಮಾಡಿಕೊಡುವ ಕೆಲಸ ಪ್ರಮುಖವಾಗಿರುವುದನ್ನ ಗಮನಿಸಬಹುದಾಗಿದೆ.

**ಪರಿಸಮಾಪ್ತಿ :**

ತಳವಾರಿಕೆ ವೃತ್ತಿಯು ಪಾರಂಪರಿಕವಾಗಿ ಕೆಲವು ಸಮುದಾಯಗಳಲ್ಲಿ ಇಂದಿಗೂ ತಳವಾರಿಕೆ ವೃತ್ತಿಯನ್ನು ಅವಲಂಬಿಸಿರುವುದನ್ನು ನಾವು ಕಾಣುತ್ತೇವೆ. ತಳವಾರಿಕೆ ವೃತ್ತಿಯನ್ನು ಬಿಟ್ಟು ಬದುಕಲು ಅವರು ಇಚ್ಚಿಸದೆ ಈ ವೃತ್ತಿಯು ತಮ್ಮ ಘನತೆಯ ಸಕೇತ ಎಂದು ಅದನ್ನೆ ತಮ್ಮೊಳಗಿನ ಜೀವನಾಡಿಯಂತೆ ಬದುಕುತ್ತಿರುವುದನ್ನ ಕಾಣಸಿಗುತ್ತಾರೆ. ಪ್ರಸ್ತುತ ಕೆಲವು ಸಮುದಾಯದ ಜನರು ಆಧುನಿಕ ಜಗತ್ತಿಗೆ ಹೊಂದಿಕೊAಡು ಕಾಲ ಬದಲಾದಂತೆ ಶಿಕ್ಷಣವನ್ನು ಪಡೆದುಕೊಂಡು ಹಳೆ ಸಂಪ್ರದಾಯದ ವೃತ್ತಿಯನ್ನು ಬಿಟ್ಟು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬೇರೆ ಬೇರೆ ನಗರಗಳಿಗೆ ವಲಸೆ ಹೋಗುವುದರ ಮೂಲಕ ಇತರ ವೃತ್ತಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಈ ಪಾರಂಪರಿಕ ವೃತ್ತಿಯನ್ನು ಹೊಂದಿರುವ ಸಮುದಾಯಗಳು ಇಂದಿನ ದಿನಮಾನಗಳಲ್ಲಿ ಕ್ಷೀಣಿಸುತ್ತಿರುವುದನ್ನ ಕಾಣಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ಈ ತಳವಾರಿಕೆ ವೃತ್ತಿಯು ಇಂದಿಗೂ ಕೂಡ ಜೀವಂತವಿದ್ದು ಅದನ್ನ ತಮ್ಮ ಬದುಕಿನ ಭಾಗವಾಗಿ ಹಲವಾರು ಕೆಳ ವರ್ಗದ ಸಮುದಾಯದ ಜನರು ಇದನ್ನ ಅಳವಡಿಸಿಕೊಂಡು ಸಮಾಜದಲ್ಲಿ ಈ ವೃತ್ತಿಯು ಕೂಡ ಸಮಾಜದ ಒಂದು ಭಾಗವಾಗಿದೆ ಹಾಗೂ ಸಮಾಜದ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಆರಕ್ಷಕರಂತೆ ಇವರು ಕಾರ್ಯ ನಿರ್ವಹಿಸುತ್ತಿರುವುದನ್ನ ಕಾಣಬಹುದಾಗಿದೆ.

**ಅಡಿಟಿಪ್ಪಣಿ**

೧. ಶ್ರೀ ಶ್ರೀರಾಮ ಇಟ್ಟಣ್ಣವರ,ತಳವಾರ(ಲೇ ಪು ಸಂ ೨೪೭)ವಡ್ಡಾರಾಧನೆ,ನರಸಿಂಹಾಚಾರ್ಯ ಡಿ.ಎಲ್ (ಸಂ)ಡಿ .ವಿ .ಕೆ ಮೂರ್ತಿ ಪ್ರಕಾಶನ ,ಮೈಸೂರ

೨. ವಿರುಪಾಕ್ಷಿ ಪೂಜಾರಹಳ್ಳಿ, "ಕರ್ನಾಟಕದಲ್ಲಿ ತಳವಾರಿಕೆ"(ಪು.ಸಂ ೨೫), ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬,

೩. ವಿರುಪಾಕ್ಷಿ ಪೂಜಾರಳ್ಳಿ,"ಕರ್ನಾಟಕದಲ್ಲಿ ತಳವಾರಿಕೆ",ಪು.ಸಂ-೯, ಕನ್ನಡ ವಿಶ್ವವಿದ್ಯಾಲಯ,ಹಂಪಿ.೨೦೦೬

೪. ಅದೇ ಪುಸ್ತಕ, ಪು.ಸಂ-೧೦.೧೧

**ಪರಾಮರ್ಶ ಗ್ರಂಥಗಳು**

೧. ಶ್ರೀ ಶ್ರೀರಾಮ ಇಟ್ಟಣ್ಣವರ,ತಳವಾರ,ವಡ್ಡಾರಾಧನೆ,ನರಸಿಂಹಾಚಾರ್ಯ ಡಿ.ಎಲ್ (ಸಂ)ಡಿ .ವಿ .ಕೆ ಮೂರ್ತಿ ಪ್ರಕಾಶನ ,ಮೈಸೂರ

೨. ವಿರುಪಾಕ್ಷಿ ಪೂಜಾರಹಳ್ಳಿ, "ಕರ್ನಾಟಕದಲ್ಲಿ ತಳವಾರಿಕೆ", ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬

೩. ದುರುಗಪ್ಪ ಎಂ.ಕೆ., ವಿಜಯನಗರೋತ್ತರ ಬೇಡ ಜನಾಂಗ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೦

೪. ನೇಗಿನಹಾಳ ಎಂ.ಬಿ., ನೇಗಿನಹಾಳ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫. ವೀರೇಶ ಬಡಿಗೇರ, ಶಾಸನಗಳಲ್ಲಿ ಆಯಗಾರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.